# ಶ್ರೀರಂಗಪಟ್ಟಣ ಕೋಟೆಯ ಸಪ್ತ ದ್ವಾರಗಳು!

ಶ್ರೀರಂಗಪಟ್ಟಣ ಕೋಟೆಯ ಏಳು ಮಹಾದ್ವಾರಗಳು ಚರಿತ್ರೆಯ ಅನೇಕ ಕಥೆಗಳನ್ನು ತಮ್ಮಲ್ಲಿ ಹುದುಗಿಸಿಟ್ಟುಕೊಂಡಿವೆ. ಪಿಸುಗುಡುವ ಸ್ಮಾರಕಗಳ ರೂಪದಲ್ಲಿರುವ ಈ ದ್ವಾರಗಳು ವಿನ್ಯಾಸದ ಕಾರಣದಿಂದಲೂ ಗಮನಸೆಳೆಯುವಂತಹವು.

■ ಗಣಂಗೂರು ನಂಜೇಗೌಡ

ಶ್ರೀರಂಗಪಟ್ಟಣ ಸುಮಾರು 200 ವರ್ಷಗಳ ಕಾಲ ಹಲವು ಅರಸರಿಗೆ ರಾಜಧಾನಿಯಾಗಿ ಮೆರೆದ ಪಾರಂಪರಿಕ ಪಟ್ಟಣ. ಒಂಭತ್ತನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಯದು ವಂಶದ ಒಡೆಯರ್ ದೊರೆಗಳು ಮತ್ತು ಹೈದರ್–ಟಿಪ್ಪು ಕಾಲದವರೆಗಿನ ಅನೇಕ ರಾಜರು, ಸಾಮಂತರ ಹೆಜ್ಜೆಗುರುತುಗಳ ಚಾರಿತ್ರಿಕ ಸ್ಥಳ ಈ ಪಟ್ಟಣ.

ಆಳರಸರು ತಮ್ಮ ಅರಮನೆ, ಖಜಾನೆ, ಶಸ್ತ್ರಾಗಾರಗಳ ರಕ್ಷಣೆಗೆ ನಿರ್ಮಿಸಿದ ಅಭೇದ್ಯ ಕೋಟೆ ಶತ್ರುಪಡೆಯಿಂದ ಶ್ರೀರಂಗಪಟ್ಟಣವನ್ನು ಹಲವು ಬಾರಿ ರಕ್ಷಿಸಿದೆ. ಹೊಯ್ಸಳರ ಉದಯಾದಿತ್ಯನ ಕಾಲದಲ್ಲಿ, 12ನೇ ಶತಮಾನದಲ್ಲಿ ಕೋಟೆಯ ನಿರ್ಮಾಣ ಆರಂಭವಾಯಿತು. ಬರುಜು, ಮಹಾದ್ವಾರಗಳ ನಿರ್ಮಾಣ ಕಾರ್ಯ ಟಿಪ್ಪು ಕಾಲದವರೆಗೆ (1782–1799) ನಡೆಯಿತು. ಕಂದಕಕ್ಕೆ ಹೊಂದಿಕೊಂಡಿರುವ ಮೊದಲ ಸುತ್ತಿನ ಕೋಟೆಗೆ ಪಟ್ಟಣದ ಸುತ್ತ ಪ್ರವೇಶದ್ವಾರಗಳಿದ್ದು, ಎರಡು ಮತ್ತು ಮೂರನೇ ಸುತ್ತಿನ ಕೋಟೆ ದಾಟಿ ಈಚೆ ಬರಲು ಕಿರು ಸೇತುವೆಗಳಿದ್ದ ಕುರುಹುಗಳಿವೆ.

ಕಾವೇರಿ ನದಿಗೆ ಹೊಂದಿಕೊಂಡಂತಿರುವ 6.5 ಕಿ.ಮೀ. ಸುತ್ತಳತೆಯ ಮೂರು ಸುತ್ತಿನ ಈ ಕಲ್ಲಿನ ಕೋಟೆಯಿಂದ ಹೊರ ಜಗತ್ತಿಗೆ ಸಂಪರ್ಕ ಕಲ್ಪಿಸಲು ಏಳು ದ್ವಾರಗಳನ್ನು ನಿರ್ಮಿಸಲಾಗುತ್ತು. ಈ ದ್ವಾರಗಳು ರಚನೆ, ಎತ್ತರ ಮತ್ತು ವಿನ್ಯಾಸದಲ್ಲಿ ಭಿನ್ನವಾಗಿವೆ. 'ಆನೆಕೋಟೆ' (ಎಲಿಫೆಂಟ್ ಗೇಟ್) ಮತ್ತು 'ಮೈಸೂರು ದ್ವಾರ'ಗಳು ಭೂಪ್ರದೇಶಕ್ಕೆ ಸಂಪರ್ಕ ಕಲ್ಪಿಸಿದರೆ, ಉಳಿದ ಐದು ದ್ವಾರಗಳು ಕಾವೇರಿ ನದಿಗೆ ಸಂಪರ್ಕ ಕೊಂಡಿಯಂತಿವೆ. ಕಮಾನು ಮಾದರಿಯ ಈ ದ್ವಾರಗಳು ಕಲ್ಲು, ಸುಟ್ಟ ಇಟ್ಟಿಗೆ ಮತ್ತು ಚುರಕಿ ಗಾರೆಯಿಂದ ನಿರ್ಮಾಣಗೊಂಡಿವೆ.

## ಬೆಂಗಳೂರು ಗೇಟ್

ಪಟ್ಟಣವನ್ನು ಪ್ರವೇಶಿಸಲು ಇದ್ದ, ಈಗಲೂ ಇರುವ ಮುಖ್ಯ ಪ್ರವೇಶ ಮಾರ್ಗ 'ಬೆಂಗಳೂರು ಗೇಟ್'. ಇದನ್ನು 'ಗಂಜಾಂ ಗೇಟ್' ಎಂತಲೂ ಕರೆಯುತ್ತಾರೆ. ಅಟ್ಟಣಿಗೆ ಕಟ್ಟಿದ ಎತ್ತರದ ಆನೆಯ ಮೇಲೆ ಕುಳಿತು ಪ್ರವೇಶಿಸುವಷ್ಟು ಎತ್ತರದ ದ್ವಾರವಿದು.

ಹೊರ ಭಾಗದ ಮೊದಲ ಸುತ್ತಿನ ಕೋಟೆಯ ದ್ವಾರ ಸದ್ಯಕ್ಕೆ ಉಳಿದಿಲ್ಲ. ಎರಡು ಮತ್ತು ಮೂರನೇ ಸುತ್ತಿನ ಕೋಟೆಗಳ ದ್ವಾರಗಳನ್ನು ದಾಟಿದರೆ ಜಾಮಿಯಾ ಮಸೀದಿ ಕಾಣಿಸುತ್ತದೆ. ದ್ವಾರದ ಇಬ್ಬದಿಯಲ್ಲಿ ಸೈನಿಕರ ಕಾವಲು ಕೋಣೆಗಳಿವೆ. ಒಂದೊಂದು ಕಾವಲು ಮನೆಯಲ್ಲಿ ಮೂರರಿಂದ ಐದು ಕೋಣೆಗಳಿದ್ದು, ಒಂದು


ಬೆಂಗಳೂರು ಗೇಟ್!


ಎಲಿಫೆಂಟ್ ಗೇಟ್



ವಾಟರ್ ಗೇಟ್


ಮೈಸೂರು ಗೇಟ್